


ವಿಜಯ ಕುಮಾರಿ

# ಸಂವಾದ

■ ಪ್ರಕಾಶ್ ಮಲ್ಕಿ ಒಡೆಯರ್

ಕಾಡನು ಬಿಟ್ಟು ಪ್ರಾಣಿಗಳು
ನಾಡಿಗೇಕೆ ಬರುತಿವೆಯಮ್ಮಾ?
ಪಿಜ್ಜಾ ಬರ್ಗರ್ ತಿನ್ನಲು
ಆಸೆಯೇನಮ್ಮಾ?
ಹಾಗಲ್ಲ ಕಂದಾ, ಇಲ್ಲಿಕೇಳು
ಕಾಡನು ಕಡಿದು ಬಯಲು ಮಾಡಿದ
ಭಂಡರ ದೆಸೆಯಿಂದ,
ತಿನ್ನಲು ಏನೂ ಸಿಗದ ಕಾರಣದಿಂದ!

ಗುಡ್ಡಗಳೇಕೆ ಕುಸಿಯುತಲಿವೆ
ಕಾಲು ಸೋತಿವೆಯೇನಮ್ಮಾ
ಹಾಗಲ್ಲ ಕಂದಾ, ಇಲ್ಲಿ ಕೇಳು
ಕಾಡನು ಕಡಿದು ನೆಲಸಮ ಮಾಡಿದರೆ
ಹರಿಯುವ ನೀರಿಗೆ ತಡೆಯೆಲ್ಲಿ?
ಹಾಗಾಗಿ ಬೆಟ್ಟ ಗುಡ್ಡ ಕುಸಿಯುತಲಿಹುದು
ಎಂದಿಗೆ ಸ್ವಾರ್ಥಿ ಜನರ ಕಣ್ ತೆರೆಯುವುದು
ಅಂದಿಗೆ ಪರಿಸರ ಉಳಿಯುವುದು!

## ಕುಂಚ ಪ್ರಪಂಚ



**ಅಥರ್ವ ಎ. ಶಾಸ್ತ್ರಿ**
3.5 ವರ್ಷ
ಜೆ.ಪಿ. ನಗರ ಬೆಂಗಳೂರು







**ಇಂಚರಾ ದತ್ ಎಂ.ಎಸ್**
9ನೇ ತರಗತಿ,
ಐಟಿಐ, ಕೆ.ಆರ್ ಪುರಂ
ಬೆಂಗಳೂರು





**ಸಿಂಧೂ ಅಡಿಗ**
1ನೇ ತರಗತಿ,
ಸೈಂಟ್ ಥಾಮಸ್
ಶಾಲೆ, ಬೈಂದೂರು